ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 05.02.2026

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಬಿ.ಕೆ ವಕೀಲರಿಂದ

1. ನಾನು ವಾಸವಾಗಿರುವ ಮನೆಯಲ್ಲಿ ತಿಮ್ಮೇಗೌಡ ಬಿನ್ ಕರೀಗೌಡ, ವೆಂಕಟೇಶ್ ಬಿನ್ ರಾಮೇಗೌಡ ಎಂಬುವವರು ಸಹ ವಾಸ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಈಗ ಇಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹ ಸದರಿಯವರು ನಮ್ಮ ಮನೆಯಲ್ಲಿ ವಾಸ ಇದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಂಗದ ಸ್ಥಳದಲ್ಲಿ ಗ್ರಾಮದಲ್ಲಿ ಹಬ್ಬ ಹರಿದಿನಕ್ಕೆ ಜನರು ಸೇರುತ್ತಿದ್ದರು ಮತ್ತು ಹಬ್ಬ ಮುಗಿದ ನಂತರ ಅದು ಖಾಲಿಯಾಗಿಯೆ ಇರುತ್ತಿತ್ತು ಎಂದರೆ ಸರಿಯಲ್ಲ. ನಾನು ರಂಗಸ್ಥಳವು ಖಾಲಿ ಇದ್ದಾಗ ಅಲ್ಲಿ ನನಗೆ ಸೇರಿದ ಆಡು, ಕುರಿಗಳನ್ನು ಕಟ್ಟಿ ಹಾಕಿ ಕೊಳ್ಳುತ್ತಿದ್ದೆ, ಗ್ರಾಮಸ್ಥರು ಖಾಲಿ ಇರುವ ಕಾರಣದಿಂದ ಅವುಗಳನ್ನು ಕಟ್ಟಿ ಹಾಕಲು ನನಗೆ ಅನುಮತಿ ಕೊಟ್ಟಿದ್ದರು ಎಂದರೆ ಸುಳ್ಳು. ನಾನು ರಂಗದ ಸ್ಥಳವನ್ನು ಲಪಟಾಯಿಸುವ ದುರುದ್ದೇಶದಿಂದ ಸಂಬಂಧ ಇಲ್ಲದವರ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವಾ ದಾಖಲಿಸಿ ರಂಗಸ್ಥಳವನ್ನು ಲಪಟಾಯಿಸಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ಕೊಡದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

**(ದೇವರಾಜು ಹೆಚ್.ಆರ್.)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.**